ಬಿ.ಪಿ. ಎಲ್. ಕಾರ್ಡ್‌ಗಳ ವಿತರಣೆ

561 (755) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ಮತಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡುಗಳು ಸಮರ್ಪಕವಾಗಿ ವಿತರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಸಂಡೂರು ಮತಕ್ಷೇತ್ರದಲ್ಲಿ ಇದುವರೆಗೂ ಸಮರ್ಪಕವಾಗಿ ಬಿಪಿಎಲ್ ಪಡಿತರ ಚೀಟಿಗಳು ವಿತರಣೆ ಆಗದೇ ಇರುವುದರ ಬಗ್ಗೆ ಯಾವುದೇ ದೂರುಗಳು ಸ್ವೀಕೃತಿಯಾಗಿರುವುದಿಲ್ಲ. ಮುಂದುವರೆದಂತೆ ಸಂಡೂರು ಮತಕ್ಷೇತ್ರದಲ್ಲಿ ಇದುವರೆಗೂ ಒಟ್ಟು 53,405 ಬಿಪಿಎಲ್ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಅಡಿಕೆ ಬೆಳೆಗೆ ಬೇರು ಹುಳದ ಬಾಧೆ

562 (147) ಶ್ರೀ ವಸಂತ ಬಂಗೇರ. ಕೆ. (ಬೆಳ್ತಂಗಡಿ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಗೆ ಬೇರು ಹುಳದ ಬಾಧೆ ತಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೌದಾದಲ್ಲಿ, ಜಿಲ್ಲೆಯಲ್ಲಿ ಒಟ್ಟು ಎಷ್ಟು ಎಕರೆ ಅಡಿಕೆ ತೋಟ ಬೇರು ಹುಳದ ಬಾಧೆಗೆ ಒಳಗಾಗಿದೆ;

ಇ) ಹಾಗಿದ್ದಲ್ಲಿ, ರೈತರಿಗೆ ಉಂಟಾದ ನಷ್ಟದ ಒಟ್ಟು ಮೊತ್ತವೆಷ್ಟು;

ಈ) ಈ ರೀತಿ ರೋಗದಿಂದ ನಷ್ಟ ಉಂಟಾದ ರೈತರಿಗೆ ಯಾವ ರೀತಿಯ ಪರಿಹಾರವನ್ನು ಸರ್ಕಾರ ನೀಡುವುದು?

ಶ್ರೀ ಉಮೇಶ್. ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಹೌದು.

ಆ) 2467 ಹೆಕ್ಟೇರ್ಸ್.

ಇ) ಅಂದಾಜು ರೂ. 538.00 ಲಕ್ಷಗಳು

ಈ) ಬೇರು ಹುಳ ನಿಯಂತ್ರಣಕ್ಕಾಗಿ ರೈತರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

- ಶೇ.50 ರ ಸಹಾಯಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ನೀಡಲಾಗುತ್ತಿದೆ.
- ಬೇರು ಹುಳದ ನಿಯಂತ್ರಣೆ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಪ್ರಕಟಣೆಗಳ ಮೂಲಕ ಒದಗಿಸಲಾಗುತ್ತಿದೆ
- ಬೇರು ಕೀಟ ಭಾದೆಯನ್ನು ನಿಯಂತ್ರಿಸಲು ಈವರೆಗೆ ಒಟ್ಟು 1552 ಹೆಕ್ಟೇರ್ ಪ್ರದೇಶದಲ್ಲಿ 2934 ಮಂದಿ ರೈತರಿಗೆ ರೂ.14.52 ಲಕ್ಷಗಳಷ್ಟು ನೆರವನ್ನು ನೀಡಲಾಗಿರುತ್ತದೆ.

ನಷ್ಟ ಉಂಟಾದ ರೈತರಿಗೆ ಇಲಾಖೆಯಿಂದ ಪರಿಹಾರ ನೀಡುವ ಕಾರ್ಯಕ್ರಮ ಇರುವುದಿಲ್ಲ.

ದ್ವಿಮುಖ ರಸ್ತೆ

565 (1011) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿತ್ತೂರ ಚೆನ್ನಮ್ಮಾ ಸರ್ಕಲ್‌ದಿಂದ ಗಬ್ಬೂರ ವರ್ತುಲ ವರೆಗೆ ದ್ವಿಮುಖ ರಸ್ತೆಯನ್ನು ನಿರ್ಮಿಸುವ ವಿಚಾರವಿದೆಯೇ?

ಆ) ಇದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಸ್ತುತ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.